

# ಸಂಪಾದಕೀಯ

ಕ್ರಿಸ್‌ಮಸ್ ಹಬ್ಬ ಬಂತು ನೋಡಣ್ಣಾ.... ಭೂಮಿ ಮೇಲೆ ಖುಷಿ ತಂತಣ್ಣಾ.....

ಹೌದು ಪ್ರಿಯರೇ, ಡಿಸೆಂಬರ್ ತಿಂಗಳು ಎಂದಾಕ್ಷಣ ನಮ್ಮ ಮನಸ್ಸಿಗೆ ಬರುವುದು ಕ್ರಿಸ್‌ಮಸ್ ಹಬ್ಬ. ಎಲ್ಲೆಲ್ಲೂ ಸಂಭ್ರಮ, ಸಡಗರ. ಮಗದೊಮ್ಮೆ ಕ್ರಿಸ್ತನ ಆಗಮನ ನಮ್ಮ ಹೃನ್ಮನಗಳನ್ನು ತಣಿಸಲು ನಮ್ಮ ಆತ್ಮದೊಳಗೆ ಬರಲಿದ್ದಾರೆ. ಮಾನವರೊಂದಿಗೆ ಮಾನವನಾಗಿರಲು ದೇವರು ಮಾನವ ರೂಪವನ್ನು ಧರಿಸಿ ನಮಗೆ ಮಾನವೀಯತೆಯ ಪಾಠವನ್ನು ಕಲಿಸಿ, ನಮ್ಮನ್ನು ಶಾಂತಿ, ಪ್ರೀತಿಯ, ಸೌಹಾರ್ಧತೆಯ ಜೀವನದೆಡೆಗೆ ಕರೆದೊಯ್ಯಲು ಭುವಿಗೆ ಅವತರಿಸಿದ ಏಕೈಕ ರಕ್ಷಕ ಯೇಸು! ಈ ಯೇಸು ತಮ್ಮೆಲ್ಲರನ್ನು ಹರಸಿ ಆಶೀರ್ವದಿಸಿ ಕಾಪಾಡಲೆಂದು ಹಾರೈಸುತ್ತಾ ಕ್ರಿಸ್‌ಮಸ್ ಹಬ್ಬದ ಹಾಗೂ ಹೊಸ ವರ್ಷದ ಶುಭಾಷಯಗಳನ್ನು ಕೋರುತ್ತೇನೆ.

ನಾವೆಲ್ಲರೂ ನಮ್ಮ ತಾಯಿಯನ್ನು ಪ್ರೀತಿಸುತ್ತೇವೆ ಹಾಗೂ ಅವರನ್ನು ಗೌರವದಿಂದ ಕಾಣುತ್ತೇವೆ. ಮಕ್ಕಳಾದ ನಮಗೆ ತಾಯಿಯ ಮಡಿಲೇ ಸ್ವರ್ಗ. ಅಂತಹ ತಾಯಿಯನ್ನು ನಾವೆಂದೂ ದು:ಖಿಸಲು ಇಚ್ಛಿಸುವುದಿಲ್ಲ.

ನಮ್ಮ ಜೀವನದಲ್ಲಿ ನಮಗೆ ಇನ್ನೋರ್ವ ತಾಯಿ ಇದ್ದಾರೆ. ಅವರೇ ನಮ್ಮ ಪ್ರಕೃತಿ ಮಾತೆ ಆ ಮಾತೆಯ ಮಡಿಲಲ್ಲಿ ನಾವೆಲ್ಲರು ಹುಟ್ಟಿ ಬೆಳೆದು ಸಮೃದ್ಧಿಯಾಗಬೇಕೆಂಬುದೇ ಆಕೆಯ ಇಚ್ಛೆಯಾಗಿದೆ. ಈ ನಮ್ಮ ಪ್ರಕೃತಿ ಮಾತೆಗೆ ನಾವು ಯಾವ ರೀತಿಯ ಗೌರವವನ್ನು ನೀಡುತ್ತೇವೆ, ಹಾಗೂ ನಮ್ಮ ಕರ್ತವ್ಯದ ಬಗ್ಗೆ ಕೆಲವು ವಿಚಾರಗಳನ್ನು ಮನಸ್ಸಿಗೆ ತಂದುಕೊಳ್ಳೋಣ.

ನಮ್ಮ ಪ್ರಕೃತಿ ನಮ್ಮ ಮನೆ. ಪ್ರಕೃತಿ ಮಾತೆಯ ಸವಿಯನ್ನು ಅನುಭವಿಸುವ ನಾವು ಈ ನಮ್ಮ ಪರಿಸರವನ್ನು ಸ್ವಚ್ಛವಾಗಿಡುವುದು ನಮ್ಮೆಲ್ಲರ ಹೊಣೆಯಾಗಿದೆ. ನಮ್ಮ ಪರಿಸರವನ್ನು ಪ್ರೀತಿಸಿ ಪೋಷಿಸೋಣ. ಅದನ್ನು ಸ್ವಚ್ಛವಾಗಿಟ್ಟಲ್ಲಿ ನಾವು ಉತ್ತಮ ಆರೋಗ್ಯದಿಂದಿರುತ್ತೇವೆ. ದೇವರು ಈ ಸುಂದರ ಸೃಷ್ಟಿಯನ್ನು ನಮ್ಮ ಉಪಯೋಗಕ್ಕಾಗಿ ಹಾಗೂ ಸಂತೋಷಕ್ಕಾಗಿ ನೀಡಿರುತ್ತಾರೆ ಎಂಬುದನ್ನು ಮರೆಯದಿರೋಣ.

ಆದಷ್ಟು ಮಟ್ಟಿಗೆ ತ್ಯಾಜ್ಯ ವಸ್ತುಗಳನ್ನು ಎಲ್ಲೆಂದರಲ್ಲಿ ಬಿಸಾಡದೆ ಕಸದ ತೊಟ್ಟಿಗಳಲ್ಲಿ ಹಾಕಿ ನಮ್ಮ ಪರಿಸರವನ್ನು ಸ್ವಚ್ಛವಾಗಿಡೋಣ. ಪ್ಲಾಸ್ಟಿಕ್ ಬಳಕೆಯನ್ನು ಮೊಟಕುಗೊಳಿಸೋಣ. ಅದನ್ನು ಉಳಿಸುವುದು ಬೆಳೆಸುವುದು ದಿನದಿಂದ ದಿನಕ್ಕೆ ತುಂಬಾ ಸೂಕ್ಷ್ಮವಾದ ವಿಷಯವಾಗಿದೆ. ನಮ್ಮ ದಡ್ಡತನದಿಂದ ಹಾಗೂ ನಿರ್ಲಕ್ಷದಿಂದ ಈ ಪರಿಸರಕ್ಕೆ ನೀಡಬೇಕಾದ ನ್ಯಾಯವನ್ನು, ಗೌರವವನ್ನು, ನೀಡುವಲ್ಲಿ ನಾವೆಲ್ಲರೂ ನಿಷ್ಫಲರಾಗಿದ್ದೇವೆ.

ನಾವು ನಮ್ಮ ಜೀವನೋಪಾಯಕ್ಕಾಗಿ ಪ್ರಕೃತಿ ಮಾತೆಯನ್ನೇ ಅವಲಂಭಿಸಿರುತ್ತೇವೆ. ಅವಳು ನಮಗೆ ಬೇಕಾದ ಆಹಾರ, ನೀರು, ಗಾಳಿ ಹಾಗೂ ನೆಲೆಯನ್ನು ನೀಡುತ್ತಿರುವ ಪುಣ್ಯ ಮಾತೆಯಾಗಿದ್ದಾಳೆ. ಆದರೆ ಈ ಸುಂದರ ಪ್ರಕೃತಿಯ ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಮಳೆಯಿಂದಾಗುವ ಅನಾಹುತಗಳು ಹಾಗೂ ಮಾನವನ ಅನೇಕ ದುಷ್ಕೃತ್ಯಗಳನ್ನು ಎದುರಿಸಲು ಅವಳು ನಿಶ್ಯಕ್ತಳಾಗಿದ್ದಾಳೆ. ಪ್ರಕೃತಿಯ ವಿಕೋಪಗಳಿಗೆ ಶರಣಾಗುತ್ತಿರುವ ಈ ನಮ್ಮ ಮಾತೃಭೂಮಿಗೆ ನಾವು ಯಾವ ರೀತಿಯ ಸಹಕಾರವನ್ನು ನೀಡೋಣ? ಇವತ್ತು ನಾವು ಈ ವಿಷಯದ ಬಗ್ಗೆ ಚಿಂತನೆ ನಡೆಸದಿದ್ದಲ್ಲಿ ಮುಂದಿನ ಪೀಳಿಗೆಯು ಅನೇಕ ಅನಾಹುತಗಳನ್ನು ಅನುಭವಿಸಬೇಕಾದ ಅನಿವಾರ್ಯತೆ ಖಂಡಿತ ಬರುವುದು. ಮಾತ್ರವಲ್ಲದೆ ಉಸಿರಾಡಲು ಕೃತಕ ವಾಯುವನ್ನು ಅನುಸರಿಸುವ ಪರಿಸ್ಥಿತಿ ಖಂಡಿತವಾಗಿಯೂ ಎದುರಾಗಬಹುದು. ಆದುದರಿಂದ ಇಂದೇ ಎಚ್ಚೆತ್ತುಕೊಳ್ಳೋಣ.

ನಾವು ಇಂದು ಪರಿಸರವನ್ನು ಪೋಷಿಸುವಲ್ಲಿ ವಿಫಲರಾದರೆ ನಮ್ಮ ಮುಂದಿನ ಜನಾಂಗಕ್ಕೆ ಹಸಿರೇ ಉಸಿರು, ಶುದ್ಧ ನೆಲ, ಜಲ, ಗಾಳಿಯ ಬಗ್ಗೆ ತಿಳಿಸುವುದಾದರೂ ಹೇಗೆ?

ಆದುದರಿಂದ ಬನ್ನಿ ಮಕ್ಕಳೇ, ನಾವೆಲ್ಲರೂ ನಮ್ಮ ಪ್ರಕೃತಿಮಾತೆಗೆ ಶರಣಾಗೋಣ. ಆದಷ್ಟು ಬೇಗನೇ ಅವಳಿಗೆ ಬೇಕಾದ ಪೋಷಣೆಯನ್ನು ವಿದ್ಯಾರ್ಥಿಗಳಾಗಿ ನಮ್ಮ ಕೈಯಿಂದಾಗುವ ಅಲ್ಪ ಸ್ವಲ್ಪ ಸೇವೆಯನ್ನು ನೀಡೋಣ. ಕಸವನ್ನು ಎಲ್ಲೆಂದರಲ್ಲಿ ಬಿಸಾಡದೆ ಸೂಕ್ತ ಕಸದ ತೊಟ್ಟಿಗಳಲ್ಲಿ ಹಾಕಿ ನಮ್ಮ ಪರಿಸರದ ಗೌರವವನ್ನು ಹಾಗೂ ಸ್ವಚ್ಛತೆಯನ್ನು ಕಾಪಾಡೋಣ. ನಾವು ನಮ್ಮ ಪ್ರಕೃತಿಯಿಂದ ಕೇವಲ ಪ್ರಯೋಜನವನ್ನು ಪಡೆದುಕೊಳ್ಳುವ ವಿಷಯಕ್ಕೆ ಮಾತ್ರ ಹೆಚ್ಚು ಗಮನ ಕೊಡದೆ ತಿರುಗಿ ಪ್ರಕೃತಿಗೆ ನಮ್ಮ ಕೃತಜ್ಞತಾ ಭಾವನೆಯಿಂದ ನಾವು ಏನನ್ನು ಮಾಡುತ್ತೇವೆ ಎಂಬುವುದರ ಬಗ್ಗೆ ಗಮನ ಹರಿಸೋಣ ಹಾಗೂ ಏಕಮನಸ್ಸಿನಿಂದ ನಮ್ಮೆಲ್ಲರ ಸಹಕಾರ ನೀಡೋಣ. ನಾವೆಲ್ಲರೂ ಮಾತೆಯ ಪ್ರೀತಿಯ ಮಕ್ಕಳಾಗಿ ಸಂತೋಷದಿಂದ ಅವಳ ಮಡಿಲಲ್ಲಿ ಹಚ್ಚ ಹಸಿರಿನ ನಿರ್ಮಲ ಗಾಳಿಯನ್ನು ಸೇವಿಸುತ್ತಾ ನಿಟ್ಟುಸಿರು ಬಿಡೋಣ.

# ಧರ್ಮ ಜ್ಯೋತಿಯಲ್ಲಿ ನನ್ನ ಒಡನಾಟದ ನುಡಿಗಳು



ಶ್ರೀಮತಿ॥ ಶಾಲಿನಿ

ನಾನು ಶ್ರೀಮತಿ ಶಾಲಿನಿ. ಕಳೆದ 38 ವರ್ಷಗಳಿಂದ ಧರ್ಮಜ್ಯೋತಿ ಸಮಾಜ ಸೇವಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಮೊದಲ ಆ ದಿನಗಳಲ್ಲಿ ಹಳ್ಳಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಮಯಗಳು ನನ್ನಲ್ಲಿ ಇನ್ನೂ ಜೀವಂತವಾಗಿವೆ. ವಾಮಂಜೂರು ಪರಿಸರದ ಹಳ್ಳಿ ಜನರು ಮೊದಲು ನಾಲ್ಕು ಗೋಡೆಯ ಮಧ್ಯದಲ್ಲಿ ತಮ್ಮ ಜೀವನವನ್ನು ನಡೆಸುತ್ತಾ ಬದುಕುತ್ತಿದ್ದರು. ಅವರಿಗೆ ಸಮಾಜದ ಆಗು – ಹೋಗುಗಳ ಬಗ್ಗೆ ಹೆಚ್ಚಿನ ಅರಿವಿರಲಿಲ್ಲ. ಅವರಲ್ಲಿ ಅನೇಕರು ಅನಕ್ಷರಸ್ಥರು. ಅವರ ಮಕ್ಕಳೂ ಕೂಡಾ ಹೆಚ್ಚಿನವರು ಶಾಲೆಗಳಿಗೆ ಹೋಗದೆ ಮನೆಗಳಲ್ಲಿ ಕುಳಿತುಕೊಂಡು ಬೀಡಿ ಕಟ್ಟುವವರಾಗಿದ್ದರು. ಅಂದು ಮಹಿಳೆಯರಿಗೆ ತಮ್ಮ ಮಕ್ಕಳು ತಮ್ಮಂತೆಯೇ ಆಗಬಾರದೆಂಬ ಅರಿವಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿಧರ್ಮಜ್ಯೋತಿ ಸಂಸ್ಥೆಯು ಅವರನ್ನು ಬೆಳಕಿಗೆ ತರುವ ಪ್ರಯತ್ನವನ್ನು ಮಾಡುವ ಉದ್ದೇಶದಿಂದ ಸಿ. ಮರಿಯಗೊರೆಟ್ಟಿಯವರ ಮಾರ್ಗದರ್ಶನದಂತೆ ನಾವು ಹಳ್ಳಿಗೆ ಹೋಗುವಾಗ ಮೊದಮೊದಲು ನಮ್ಮ ಭೇಟಿಯು ಅವರಿಗೆ ತುಂಬಾ ಹಿಂಸೆ ತರುತ್ತಿತ್ತು. ದಿನ ದಿನ ಕಳೆದಂತೆ ಸತತ ಭೇಟಿಯಿಂದ ಮತ್ತು ಪ್ರೇರಣೆಯಿಂದ ಅವರಲ್ಲಿ ಆತ್ಮವಿಶ್ವಾಸ ಬೆಳೆದು ಅವರ ಸಮಸ್ಯೆಗಳನ್ನೆಲ್ಲಾ ನಮ್ಮಲ್ಲಿ ಹೇಳಿಕೊಳ್ಳುವಂತಾದರು. ಹೆಚ್ಚಿನ ಮಹಿಳೆಯರು ನಮ್ಮಲ್ಲಿ ಮಾತಾಡಲು ಹಿಂಜರಿಯುತ್ತಿದ್ದರು. ಜನಜಾಗೃತಿಯನ್ನುಂಟು ಮಾಡಿದ ಮೇಲೆ ಮಾಹಿತಿಯ ಸದುಪಯೋಗವನ್ನು ಪಡೆದುಕೊಂಡು ಮಾತನಾಡುವಂತಾದರು.

ಹೀಗೆ ಜನರಿಗೆ ಸಮಾಜದ ನೋವು–ನಲಿವುಗಳ ಬಗ್ಗೆ ಅರಿವು ಮೂಡಿಸಿ ಮಾಹಿತಿ ಶಿಬಿರಗಳೊಂದಿಗೆ ಜನರಲ್ಲಿ ಸಂಘಟನೆಯನ್ನು ಮೂಡಿಸಲಾಯಿತು. ಮೊದಲು ಮಾಹಿತಿಯ ಬಗ್ಗೆ ನಿರಾಸಕ್ತಿ ಹೊಂದಿದ್ದ ಜನರು ಆಮೇಲೆ ಆಸಕ್ತಿ ಉತ್ಸಾಹದಿಂದ ಪ್ರತಿಯೊಂದು ಚಟುವಟಿಕೆಯಲ್ಲೂ ಭಾಗವಹಿಸುವಂತಾದರು. ಸಮಾಜದಲ್ಲಿ ಆಗುವಂತಹ ವಿಷಯಗಳನ್ನು ಆಧರಿಸಿ ಬೀದಿನಾಟಕಗಳ ಮುಖಾಂತರ ಅಲ್ಲದೇ, ಶೈಕ್ಷಣಿಕ ಪ್ರವಾಸಗಳನ್ನು ಏರ್ಪಡಿಸಿ ಆ ಬಗ್ಗೆ ಜನರಿಗೆ ತಿಳುವಳಿಕೆ ಕೊಡುವುದರ ಮೂಲಕ ಜನರನ್ನು ಹುರಿದುಂಬಿಸಲಾಯಿತು. ಹೀಗೆ ಸಮುದಾಯವನ್ನು ಕಟ್ಟಿದೆವು, ಜನರನ್ನು ಒಟ್ಟುಗೂಡಿಸಿದೆವು. ಸದಸ್ಯರ ಮನೆ ಪರಿಸ್ಥಿತಿಯನ್ನು ಅರಿತುಕೊಂಡು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಹಾಗೂ ಮುತುವರ್ಜಿಯನ್ನು ವಹಿಸುತ್ತಾ ಬಡಜನರ ಏಳಿಗೆಯನ್ನು ಪ್ರೋತ್ಸಾಹಿಸುತ್ತಾ ಬರಲಾಯಿತು.

ಈಗ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಯೊಂದು ಕಾರ್ಯಕ್ರಮದಲ್ಲೂ ಭಾಗವಹಿಸಿ, ತಮ್ಮ ಹಕ್ಕುಗಳಿಗಾಗಿ ಶ್ರಮಿಸುತ್ತಿದ್ದಾರೆ. ಪ್ರತಿಯೊಂದು ಕಾರ್ಯಕ್ಷೇತ್ರದಲ್ಲೂ ಆತ್ಮಸ್ಥೈರ್ಯದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಮಹಿಳೆಯರು ಹೊರಗೂ ದುಡಿದು ಮನೆಯಲ್ಲೂ ಕಾರ್ಯ ನಿರ್ವಹಿಸಿ, ಸ್ವ–ಸಹಾಯ ಸಂಘಗಳಿಗೆ ಸೇರಿಕೊಂಡು ಸ್ವಾವಲಂಬಿಗಳಾಗಿ ಜೀವನ ನಡೆಸುತ್ತಿದ್ದಾರೆ. ಅಲ್ಲದೇ, ಸ್ವಂತ ಉದ್ಯೋಗವನ್ನು ತಮ್ಮದಾಗಿರಿಸಿಕೊಂಡು ಅದರಲ್ಲೂ ಗ್ರಾಮೀಣ ಬ್ಯಾಂಕುಗಳ ನೆರವನ್ನು ಪಡೆದುಕೊಂಡು ಹೋಗುತ್ತಿದ್ದಾರೆ. ಅಲ್ಲದೇ ರಾಜಕೀಯ ಕ್ಷೇತ್ರದಲ್ಲೂ ಕಾಲಿರಿಸಿ ಅಲ್ಲಿಯೂ ವಿಜೇತರಾಗಿ ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ತಮ್ಮ ಮಕ್ಕಳನ್ನು ಒಳ್ಳೆಯ ವಿದ್ಯಾವಂತರನ್ನಾಗಿ ಮಾಡಿ ನಮ್ಮ ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತಿದ್ದಾರೆ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತಿದೆ.






ಕು. ಅಶ್ವಿತಾ

**'ಪರಿಸರ'** ಎಂಬ ಪದ ಕೇಳಿದ ಕೂಡಲೆ ನಮ್ಮ ಮನಸ್ಸಿಗೆ ಮೊದಲು ಬರುವ ಚಿತ್ರಣ – ಸುತ್ತಮುತ್ತಲೂ ಹಸಿರಿನಿಂದ ಕೂಡಿದ ಪ್ರಶಾಂತ ವಾತಾವರಣ, ದಟ್ಟ ಕಾಡು, ಪ್ರಾಣಿ, ಪಕ್ಷಿಗಳು, ಆರೋಗ್ಯವಂತ ಜೀವನ. ಆದರೆ, ಇಂದಿನ ಪ್ರಸ್ತುತ ಕಾಲದಲ್ಲಿ 'ಪರಿಸರ'ದ ಬಗ್ಗೆ ನಮ್ಮ ಯೋಚನಾ ಲಹರಿಯು ಬದಲಾಗಿದೆ. ಪ್ರಶಾಂತ ವಾತಾವರಣದ ಬದಲು ದೂಳು, ಹೊಗೆ, ವಾಹನದಟ್ಟನೆಯಿಂದ ಬರುವ ಕರ್ಕಶ ಧ್ವನಿಯೇ ನಮ್ಮ ಮನಸ್ಸಿಗೆ ಬರುತ್ತದೆ. ಈ ಚಿತ್ರಣವು ಬದಲಾಗಲು ಬಹುಮುಖ್ಯ ಹಾಗೂ ನೇರ ಕಾರಣ ಮಾನವ. ಮಾನವನ ವಿಜ್ಞಾನ ಮತ್ತು ತಂತ್ರಜ್ಞಾನದ ದೆಸೆಯಿಂದ ಪ್ರಕೃತಿಯಿಂದ ವಿಮುಖನಾಗಿ ವಿವಿಧ ಅನೈಸರ್ಗಿಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಿದ್ದಾನೆ. ದಿನನಿತ್ಯದ ಜೀವನದಲ್ಲಿ ಸವಲತ್ತುಗಳು ಹೆಚ್ಚಾದಂತೆ ಮಾನವನ ಉದಾಸೀನತೆ ತಿಳಿಗೇಡಿತನ ಎಂದು ಕಂಡುಬಂದರೂ ಇದು ಆತನ ಅನಿವಾರ್ಯತೆ ಹಾಗೂ ಅಸಹಾಯಕತೆಯಾಗಿದೆ. ಆದರೆ ಇದರ ನೇರ ಪರಿಣಾಮವು ಪರಿಸರದ ಮೇಲೆ ಬೀರುತ್ತದೆ.

ಪರಿಸರವು ವಿನಾಶದ ಕಡೆ ತೆರಳಲು ಪ್ರಮುಖ ಕಾರಣ ಹೆಚ್ಚುತ್ತಿರುವ ಜನಸಂಖ್ಯೆ, ಪರಿಸರದ ಕಾಳಜಿಯ ಮಾಹಿತಿಯು ತಿಳಿದಿದ್ದರೂ ಅದನ್ನು ಅನುಸರಿಸುವಲ್ಲಿ ತೋರುವ ನಿರ್ಲಕ್ಷತನ, ಆಧುನಿಕ ಜೀವನ ಪದ್ಧತಿ ಹಾಗೂ ಮಾನವನ ದುರಾಸೆ. ಮಾನವನು ಪರಿಸರವನ್ನು ಪ್ರತ್ಯಕ್ಷವಾಗಿ ಹಾಳು ಮಾಡುತ್ತಿದ್ದಾನೆ ಎಂದರೆ ಆತನು ತನ್ನನ್ನು ತಾನು ಪರೋಕ್ಷವಾಗಿ ಹಾಳುಗೆಡವುತ್ತಿದ್ದಾನೆ ಎಂದರ್ಥ. ಇದನ್ನು ನಾವು ಮನುಷ್ಯನ ಆಯಸ್ಸಿನ ಹಾಗೂ ಆರೋಗ್ಯದ ಏರಿಳಿಕೆಯ ಮೇಲೆ ತಿಳಿದುಕೊಳ್ಳಬಹುದು. ಹಿಂದಿನ ಕಾಲದಲ್ಲಿ ಮಾನವನು 100 ವರ್ಷ ಬದುಕುತ್ತಿದ್ದರೆ ಈಗಿನ ಕಾಲದಲ್ಲಿ ಮಾನವನ ಜೀವಿತಾವಧಿ 50 ವರ್ಷಕ್ಕೆ ಇಳಿದಿದೆ. ಈಗ ಕೀಟನಾಶಕಗಳಿಲ್ಲದೆ ಯಾವ ತರಕಾರಿ, ಧಾನ್ಯಗಳನ್ನು ಬೆಳೆಸಲು ಸಾಧ್ಯವಿಲ್ಲ, ಅಂದಮೇಲೆ ನಾವು ತಿನ್ನುವ ಆಹಾರವು ವಿಷಕ್ಕೆ ಸಮ. ಇದರಿಂದಾಗಿ ಕ್ಯಾನ್ಸರ್‌ನಂತಹ ಕಾಯಿಲೆಗಳಿಗೆ ಮಾನವನು ತುತ್ತಾಗುವುದು ಸಹಜ.

ಮಾನವನಿಂದ ಅಸಾಧ್ಯವಾದದ್ದು ಯಾವುದೂ ಇಲ್ಲ. ಪರಿಸರದ ರಕ್ಷಣೆ ದೊಡ್ಡ ಮಟ್ಟದಲ್ಲಿ ಕೈಗೊಳ್ಳದಿದ್ದರೂ ಸಣ್ಣಪುಟ್ಟ ಕಾರ್ಯಗಳಿಂದಲೇ ಪ್ರಾರಂಭಿಸಬಹುದು. ಇತ್ತೀಚಿಗಿನ ದಿನಗಳಲ್ಲಿ ರಸ್ತೆಯ ಅಗಲೀಕರಣಕ್ಕಾಗಿ ಬೀದಿ ಬದಿಯ ಮರಗಳನ್ನು ಕಡಿಯುತ್ತಿದ್ದಾರೆ. ಮರಗಳಾನ್ನು ಕಡಿಯುವ ಬದಲು ಆ ಮರಗಳನ್ನು ವರ್ಗಾಯಿಸುವ ಕ್ರಮ ಕೈಗೊಳ್ಳಬಹುದು. ಈ ಕ್ರಮವನ್ನು ಈಗಾಗಲೇ ವಿದೇಶಗಳಲ್ಲಿ ಅನುಸರಿಸುವುದರ ಮೂಲಕ ಸಾಬೀತುಪಡಿಸಿದ್ದಾರೆ. ಇದರ ವೆಚ್ಚವು ಅಧಿಕ ಎಂದು ಅನಿಸಿದ್ದರೆ, ಕಡಿದ ಮರಗಳ ಸ್ಥಳದಲ್ಲಿ ರಸ್ತೆ ನಿರ್ಮಾಣದ ಬಳಿಕ ಮತ್ತೆ ಹೊಸ ಗಿಡಗಳನ್ನು ನೆಟ್ಟು ಪೋಷಿಸಬೇಕು.

ಒಂದು ಮಗು ಬೆಳೆದು ದೊಡ್ಡವನಾಗಿ ದೇಶದ ಸತ್ಪ್ರಜೆಯಾಗಿ ಜನತೆಗೆ ಒಂದು ಒಳ್ಳೆಯ ಕೊಡುಗೆ ನೀಡಬೇಕಾದರೆ ತಾಯಿಯು ಆ ಮಗುವನ್ನು ಚಿಕ್ಕಂದಿನಿಂದಲೇ ಆಹಾರ ನೀಡಿ ಪೋಷಿಸಬೇಕಾಗುತ್ತದೆ. ಅನೇಕ ಕನಸುಗಳನ್ನು ಕಾಣಬೇಕಾಗುತ್ತದೆ. ಅದೇ ರೀತಿ ಒಂದು ಗಿಡವು ಬೆಳೆದು ಆ ಮರದಿಂದ ಶುದ್ಧ ಗಾಳಿ ನಮಗೆ ಸಿಗಬೇಕಾದರೆ ಗಿಡವನ್ನು ಚಿಕ್ಕಂದಿನಿಂದಲೇ ಗಾಳಿ ಬೆಳಕು, ನೀರನ್ನು ನೀಡಿ ಪೋಷಿಸಬೇಕಾಗುತ್ತದೆ. ಆ ಗಿಡವು ಬೆಳೆದು ಮರವಾಗಲು ತುಂಬಾ ಸಮಯ ಬೇಕಾಗುತ್ತದೆ. ಆದರೆ ಅದನ್ನು ಕಡಿಯಲು ಕೇವಲ ಕೆಲವೇ ಸಮಯ ಸಾಕು. ಇಂದು ನಾವು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂದುವರಿಯುವುದರಿಂದ ಪರಿಸರಕ್ಕೆ ಹಾನಿ ಉಂಟು ಮಾಡುತ್ತಿದ್ದೇವೆ. ಈಗಲೂ ನಾವು ಎಚ್ಚೆತ್ತುಕೊಳ್ಳದಿದ್ದರೆ ನಮ್ಮ ಮುಂದಿನ ಪೀಳಿಗೆ ದುರ್ಗತಿಯನ್ನು ಕಾಣುವುದು ಹೆಚ್ಚು ದೂರವೇನಿಲ್ಲ. ಅದಕ್ಕಾಗಿ ಹಿರಿಯರು ಹೇಳಿದ "ಮನೆಗೊಂದು ಮರ ಊರಿಗೊಂದು ವನ" ಎಂಬ ನುಡಿಯಂತೆ ಕಡ್ಡಾಯವಾಗಿ ನಡೆದುಕೊಳ್ಳೋಣ.

# Nature



**Vaishnavi 9th B**



Nature is the most beautiful and attractive surrounding around us which make us happy and provide us natural environment to live healthy. Our nature provides birds, animals, green plants, blue sky, land, running rivers, sea, forests, air, mountains, valleys, hills and many more things we use for our living of us. All the things we use for our living of us. All the things we use for our living are the assets of nature which we should not spoil and damage. Nature is the most precious and valuable gift to us from the God to live our life here on earth. Nature makes our life easy by proving all the required resources for daily living. We should thankful to our nature.

We live on the most beauti-ful planet earth which has very clean and attractive nature full of greenery; nature is our best friends which provides us all the resources to live here. It gives us water to drink, pure air to breath, food to eat, land to stay, animals, plants for our other uses etc., for our betterments. We should care out nature, make it peaceful, keep it clean and prevent it from the destruction so that we can enjoy our nature forever. Nature is a most precious gift given by the God to us to enjoy but not to harm.

# Environment Pollution

**Bavitha 9th B**



Environment is the surrounding in which we live. It is the source of life. The whole life is dependent on the environment. Proper growth of development good or bad kind of social life depends on the quality of our natural environment. The need of human being for food, water, shelter and other things depends upon the environment around us.

All changes that have brought in the plant which has resulted in many environment problems. Increase in the demand for technology and industries in the modern time impact the nature. The increasing invention of people with environment which permits more problems to grow. Some of the environment problems which are in replied growth are in increasing with the world population, deteriorating natural resources, diminishing forests, soil erosion are loss of bio-diversity rapid extension of some important animal species, collapse of fisheries, rising air and water pollution, rise in temperature, thinning of ozone layer, spoiling of sea, rivers and underground water. Even through the science and technologies have rapidly altered to term to the nature.



# ಸಂಸ್ಥೆಯ ಸೇವಾ ಚಟುವಟಿಕೆಗಳ ಒಂದು ನೋಟ



**ಟಿ. ನಾಗೇಂದ್ರರಾವ್**
ಕಾರ್ಯಕ್ರಮ ಸಂಯೋಜಕರು,
ಧರ್ಮಜ್ಯೋತಿ

ಧರ್ಮಜ್ಯೋತಿ ಸಮಾಜ ಸೇವಾ ಸಂಸ್ಥೆಯ ಸ್ಥಾಪಕರಾದ ವಂ॥ಭ॥ ಮರಿಯ ಗೊರಟ್ಟಿ ಎಸ್. ಆರ್. ಎ ಇವರು "ಶ್ರಮವೇ ಪೂಜೆ" ಎಂದು ನಂಬಿ ಅಂದು 1981 ರಲ್ಲಿ ವಾಮಂಜೂರಿನ ಪರಿಸರದ ಸಾಮಾನ್ಯ ಬಡಜನರ ಸರ್ವತೋಮುಖ ಅಭಿವೃದ್ಧಿಯ ಧ್ಯೇಯವನ್ನಿಟ್ಟುಕ್ಕೊಂಡು ಸಂಸ್ಥೆಯನ್ನು ಹುಟ್ಟುಹಾಕಿದರು. ಅಂದಿನಿಂದ ಇಂದಿನವರೆಗೂ ಅಂದರೆ 37 ವರ್ಷಗಳಿಂದ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಕ್ಷೇತ್ರಗಳೊಂದಿಗೆ ಮಕ್ಕಳ ಶಿಕ್ಷಣ ಹಾಗೂ ಮಹಿಳಾ ಸಬಲತೆಗಾಗಿ ಸಂಸ್ಥೆಯು ಶ್ರಮಿಸುತ್ತಾ ಬರುತ್ತಿದೆ.

ಭಗಿನಿ ಮರಿಯ ಗೊರಟ್ಟಿಯವರು ಅಂದು ಬೆರಳೆಣಿಕೆಯ ಸಮಾಜ ಸೇವಾಕರ್ತೆಯರನ್ನು ಹಿಡಿದುಕೊಂಡು ಗ್ರಾಮಗಳ ಬಡಜನರ, ದೀನದಲಿತರ ದುರ್ಬಲ ವರ್ಗದ ಮಕ್ಕಳ ಮಹಿಳೆಯರ ಏಳ್ಗೆಯ ಕನಸನ್ನು ಹೊತ್ತು ನಡೆದರು. ಅವರೊಡನೆ ಬೆರೆತರು. ಆರೋಗ್ಯ ನೈರ್ಮಲ್ಯ ಶಿಕ್ಷಣಕ್ಕೆ ಪ್ರಾಧಾನ್ಯತೆಕೊಟ್ಟರು.

ಹಳ್ಳಿಗಳ ಜನರು ಮೂಲಭೂತ ಸೌಲಭ್ಯಗಳ ಕೊರತೆಯಿಂದ ಹಾಗೂ ಅನಾರೋಗ್ಯದ ಸಮಸ್ಯೆಗಳಿಂದ ಮಕ್ಕಳು ವಿಧ್ಯಾಭ್ಯಾಸದಿಂದ ವಂಚಿತರಾಗಿದ್ದರು. ಇದನ್ನರಿತ ಭಗಿನಿ ಮರಿಯ ಗೊರಟ್ಟಿಯವರು ಮಾತೆ ಮರಿಯಳ ಕೃಪೆಯಿಂದ ಅಂತಹ ಜನರ ಎಳ್ಗೆಗಾಗಿ ಟೊಂಕ ಕಟ್ಟಿ ನಿಂತರು. ಧರ್ಮಜ್ಯೋತಿ ಬಡಜನತೆಯ ಅಂಧಕಾರವನ್ನು ದೂರಮಾಡುವ ದಿವ್ಯಜ್ಯೋತಿಯಾಯಿತು.

ಮರಿಯ ಗೊರಟ್ಟಿಯವರ ದಕ್ಷಮಾರ್ಗದರ್ಶನ, ಸಾಂಘಿಕ ಪ್ರೇರೇಪಣೆಯಿಂದ ಜನರು ಸಂಘಟಿತರಾದರು. ಸಮುದಾಯಗಳ ಎಲ್ಲಾ ವರ್ಗದ ಜನರು ಸಂಘಟಿತರಾಗಿ ಅಭಿವೃದ್ಧಿ ಸಂಘಗಳನ್ನು ಸ್ಥಾಪಿಸಿದರು. ಬಡಮಕ್ಕಳಿಗೆ ಶಿಕ್ಷಣದ ವ್ಯವಸ್ಥೆ, ಆರೋಗ್ಯಕ್ಕಾಗಿ ವೈದ್ಯಕೀಯ ಶಿಬಿರಗಳು, ಜಾಗೃತಿ ಸಭೆಗಳು ನಡೆದವು. "ಸಂಘ ಶಕ್ತಿ" ಅನೇಕತೆಯಲ್ಲಿ ಏಕತೆ, ಸರ್ವೋದಯ ತತ್ವದ ಮೂಲಕ ಜನರಿಂದ ಜನರಿಗಾಗಿ– ಜನರ ಪ್ರಗತಿ' ಎಂಬ ಕಲ್ಪನೆಗೆ ಪ್ರಾಶಸ್ತ್ಯ ಕೊಡಲಾಯಿತು. ಅಶಕ್ತ–ಬಡ, ಅಂಗವಿಕಲ–ಬುದ್ದಿಮಾಂಧ್ಯ ಹಾಗೂ ಕುಡಿತಕ್ಕೆ ಬಲಿಯಾದವರ ಬಗ್ಗೆ ಜಾಗೃತಿ ಕಾರ್ಯಕ್ರಮಗಳು ಸಕ್ರಿಯಗೊಂಡವು. ಸೌಲಭ್ಯಗಳಿಂದ ವಂಚಿತರಾದವರ ಮುಖದಲ್ಲಿ ಮುಗುಳ್ನಗೆ ಮೂಡಿತು.

ಸಂಸ್ಥೆಯ ಮುಖ್ಯ ಗುರಿಯಾದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿಯೊಂದಿಗೆ ಸ್ವಾವಲಂಬನೆ ಆರೋಗ್ಯದಾಯಕ ಹಾಗೂ ಗುಣಾತ್ಮಕ ಜಾತ್ಯಾತೀತ, ಸುವ್ಯವಸ್ಥಿತ ಜೀವನ ನಡೆಸಲು ಪ್ರೋತ್ಸಾಹಿಸುವುದು. ಸಮುದಾಯಗಳ ಬೆಳವಣಿಗೆಯೊಂದಿಗೆ ಸಂಸ್ಥೆಯ ಕಾರ್ಯಕ್ಷೇತ್ರಗಳು ವಿಸ್ತೃತಗೊಂಡವು. ಸಮುದಾಯಗಳಲ್ಲಿ ಆರಂಭಗೊಂಡ ಸಂಘಟನೆಗಳು (ಸಂಘಗಳು) ಸ್ವಾವಲಂಬಿಗಳಾಗಿ ತಮ್ಮ ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳಲು ಶಕ್ತವಾದವು. ಇಂದಿಗೂ ಸಂಸ್ಥೆಯ ಹಾಗೂ ಸಂಯೋಜಕರುಗಳ ಉತ್ತಮ ಮಾರ್ಗದರ್ಶನದಲ್ಲಿ ಅನೇಕ ಜನಪರ ಚಟುವಟಿಕೆಗಳನ್ನು ಮುಂದುವರಿಸಿಕೊಳ್ಳಲಾಗುತ್ತಿದೆ. ಈ ಮೇಲಿನ ಸರ್ವತೋಮುಖ ಅಭಿವೃದ್ಧಿಗಾಗಿ ಕೆಳಗಿನ ಉದ್ದೇಶಗಳನ್ನು ಕೈಗೊಳ್ಳಲಾಗುತ್ತಿದೆ.

1. ಜನರ ಬೇಡಿಕೆಗಳ ಮೇರೆಗೆ ಗ್ರಾಮೀಣ ಹಾಗೂ ಪಟ್ಟಣ

ಭಾಗಗಳಲ್ಲಿ ಸಮುದಾಯಗಳ(ಸಂಘಗಳ) ರಚನೆ. ಸ್ತ್ರೀ– ಪುರುಷರ, ಯುವಕ– ಯುವತಿಯರ ಸಂಘಗಳ ರಚನೆಗೆ ಪ್ರೋತ್ಸಾಹ.

2. ಶಿಕ್ಷಣದಿಂದ ವಂಚಿತರಾದ–ಶಾಲೆ ಬಿಟ್ಟ– ಬಾಲಕಾರ್ಮಿಕರ ಇತ್ಯಾದಿ ಮಕ್ಕಳ ಶಿಕ್ಷಣಕ್ಕೆ ಪ್ರಾಶಸ್ತ್ಯ.
3. ನೆಮ್ಮದಿಯ ಕುಟುಂಬ ಜೀವನಕ್ಕಾಗಿ ಮಹಿಳಾ ಸಬಲತೆಯ ಯೋಜನೆಗಳು.
4. ಸ್ವ–ಉದ್ಯೋಗದ ಯೋಜನೆಗಳು, ಕೌಶಲ್ಯ ತರಬೇತಿಗಳು. ಸಂಪನ್ಮೂಲ ಸಂಗ್ರಹ, ಉಳಿತಾಯ ಹಾಗೂ ಮಿತವ್ಯಯದ ಮಹತ್ವ ತಿಳಿಸುವುದು.
5. ಸಾಂಪ್ರದಾಯಿಕ ಕಲೆ– ಸಂಸ್ಕೃತಿ ಉಳಿಸಿ ಬೆಳೆಸುವ ಹಾಗೂ ಗ್ರಾಮೀಣ ಕುಶಲ ಕಲೆಗಳ ಪರಿಚಯ ಆಚರಣೆ.
6. ಸ್ವ–ಸಹಾಯ ಗುಂಪುಗಳ ಮೂಲಕ ಉಳಿತಾಯದ ಮಹತ್ವ, ಸ್ವಾವಲಂಬನೆಯೊಂದಿಗೆ ಆರ್ಥಿಕ ಅಭಿವೃದ್ಧಿ ಕ್ರಮಗಳು.
7. ಪರಿಸರ, ನೆಲ–ಜಲ ಸಂರಕ್ಷಣೆಗಾಗಿ ಕಾರ್ಯಕ್ರಮಗಳು.
8. ಆರೋಗ್ಯ– ನೈರ್ಮಲ್ಯ– ಶಿಕ್ಷಣದ ಮೂಲಕ ಕಾಯಿಲೆ ಮುಕ್ತ ಸಮುದಾಯ ನಿರ್ಮಾಣಕ್ಕೆ ಪ್ರಯತ್ನ.
9. ಮಾನಸಿಕ–ಅಂಗವಿಕಲ ಹಾಗೂ ಕುಡಿತಕ್ಕೆ ಬಲಿಯಾದವರ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.
10. ಸರಕಾರಿ ಸೌಲಭ್ಯ– ಮಕ್ಕಳಿಗಾಗಿ ಶಿಷ್ಯವೇತನ, ಆರೋಗ್ಯ ವಿಮೆ, ಸುರಕ್ಷಾ ಯೋಜನೆಗಳು, ಪಿಂಚಣಿ ಯೋಜನೆಗಳ ಮಾಹಿತಿ ಕಾರ್ಯಾಗಾರಗಳು– ಪ್ರಯೋಜನೆ ಮಾಡಿಕೊಳ್ಳಲು ಪ್ರಯತ್ನಿಸುವುದು.
11. ಸಮುದಾಯಗಳ ಸಾಮರಸ್ಯ, ಸೌಹಾರ್ದತೆಗಾಗಿ ರಾಷ್ಟ್ರೀಯ– ಧಾರ್ಮಿಕ ಹಬ್ಬ ಹರಿದಿನಗಳನ್ನು ಎಲ್ಲಾ ಮತ ಬಾಂಧವರೊಡನೆ ಆಚರಿಸಲು ಪ್ರೊತ್ಸಾಹ.
12. ಸ್ಥಳೀಯ ಆಡಳಿತ ಸಂಸ್ಥೆಯ ಪ್ರತಿನಿಧಿಗಳ ಸಹಕಾರ ಪಡೆದು ಸಮುದಾಯಗಳ ಅಭಿವೃದ್ಧಿಗೆ ಶ್ರಮಿಸುವುದು.
13. ಗ್ರಾಮೀಣ ಯುವಕ–ಯುವತಿಯರಿಗೆ ಅಲ್ಪಕಾಲೀನ ಹಾಗೂ ಕೌಶಲ್ಯಭರಿತ ತರಬೇತಿಗಳನ್ನು ಕೊಡಿಸುವುದು. ಉದ್ಯೋಗವಕಾಶಗಳ ಮಾಹಿತಿ ಒದಗಿಸುವುದು, ಆತ್ಮವಿಶ್ವಾಸ ಬೆಳೆಸುವುದು.
14. ಜಾಗೃತಿ ಕಾರ್ಯಕ್ರಮಗಳು(ಮಾನವ ಹಕ್ಕು, ಪಂಚಾಯತ್ ರಾಜ್ಯ, ಬಾಲ ಕಾರ್ಮಿಕ, ಭ್ರಷ್ಟಾಚಾರ, ಲಿಂಗ ತಾರತಮ್ಯ– ಮಹಿಳಾ ದೌರ್ಜನ್ಯ, ಮಾಹಿತಿ ಹಕ್ಕು, ಶಿಕ್ಷಣ ಹಕ್ಕು ಇತ್ಯಾದಿ)
15. ಶೈಕ್ಷಣಿಕ ಕಾರ್ಯಕ್ರಮಗಳು, ಆರೋಗ್ಯ ಸುರಕ್ಷಾ ಯೋಜನೆಗಳು, ಸಮುದಾಯ ಯೋಜನೆಗಳು, ಕಟ್ಟಡ ಕಾರ್ಮಿಕರ ಯೋಜನೆಗಳು, ಹಿರಿಯ ನಾಗರಿಕರ ಯೋಜನೆಗಳು ಇತ್ಯಾದಿ.

ಈ ಮುಂತಾದ ಸಮುದಾಯಗಳಲ್ಲಿ ಸೃಜನಾತ್ಮಕ– ಕ್ರೀಯಾಶೀಲ ಚಟುವಟಿಕೆಗಳನ್ನು ಅಳವಡಿಸುವುದರ ಮೂಲಕ ಸಾಮಾಜಿಕ– ಶೈಕ್ಷಣಿಕ– ಆರ್ಥಿಕ– ಪ್ರಗತಿದಾಯಕ ಬದಲಾವಣೆಗೆ ಶ್ರಮಿಸುವುದು.




**Harshitha 9th A**



Saving our ocean is the responsibility of each and every person living on the earth. And not only one is responsible for it, its. The global responsibility of saving the ocean and its creatures living in it for making an equal and natural balance of life on the earth. Do you know that 3/4th part of our whole earth is full of only water and marine lives from the dangerous of global warming. World ocean day has been established as a big step with the association of the ocean project and the world ocean network (W.O.N) to celebrate globally every year aiming to save the water and lives on the earth. So world ocean day has been celebrated every year of June 8.

---




**Meghna Kulal 9th B**



1. Why plastic is bad on the environment?

   Chlorinated plastic can release harmful chemicals into the surrounding soil, which can the seep into ground water or other surrounding water sources and also the ecosystem. This can cause serious harm to species that drink the water.

2. How can we reduce plastic pollution?

   Luckily, there are simple steps you can take that will dramatically decrease the amount of plastic waste you generate.

   a. Just say no to straws.
   b. Use reusable produce bags
   c. Give up gum
   d. Use reusable bottles and cups
   e. Return reusable containers
   f. Clean green

3. The manufacture of plastic, as well as the destruction by incineration pollutes air, land and water and expose workers to toxic chemicals including carcinogens.

## ಯಶಸ್ಸಿನ ಹಾದಿ

# ನನ್ನ ಜೀವನದ ಕಥೆ



**ನಾನು ಲತ ಆಚಾರ್ಯ:**

ನಾನೊಬ್ಬಳು ಬಡ ಕುಟುಂಬದಲ್ಲಿ ಜನಿಸಿ ವಿದ್ಯಾಭ್ಯಾಸ ಪಡೆಯಲು ತುಂಬಾ ಕಷ್ಟಪಡುತ್ತಿದ್ದೆನು. ಏಕೆಂದರೆ ನಾನು 6ನೇ ತರಗತಿಯಲ್ಲಿರುವಾಗ ತಂದೆ ಮರದಕೆಲಸ ಮಾಡಿ ಮತ್ತು ಅಮ್ಮ ಬೀಡಿ ಕಟ್ಟಿ ನಮ್ಮ ದೈನಂದಿನ ಅಗತ್ಯಗಳನ್ನು ಪುರೈಸುತ್ತಿದ್ದೇವು. ಆದರೆ ಅದೇ ವರ್ಷ ನನ್ನ ತಂದೆಗೆ ಹೃದಯಘಾತವಾದ ಕಾರಣ ಅವರ ಔಷಧಿ ಖರ್ಚು, ದಿನ ನಿತ್ಯದ ಅಗತ್ಯತೆಗಳನ್ನು ಹಾಗೂ ನಮ್ಮ ಇಬ್ಬರು ಮಕ್ಕಳ ವಿದ್ಯಾಭ್ಯಾಸದ ಖರ್ಚಿನ ಬಾರ ಹೆಚ್ಚಾದಾಗ ನನ್ನ ತಾಯಿ ಪ್ರಜ್ಞಾ ಎಂಬ ಮಹಿಳೆಯ ಮುಂದೆ ನಮ್ಮ ಕಷ್ಟಗಳನ್ನು ಹೇಳಿದಾಗ ಅವರು ನಮ್ಮನ್ನು ಧರ್ಮ ಜ್ಯೋತಿ ಸಮಾಜ ಸೇವಾ ಸಂಸ್ಥೆಗೆ ಪರಿಚಯಿಸಿದಾಗ ಆಗಿನ ನಿರ್ದೇಶಕಿಯವರಾದ ವಂದನೀಯ ಭಗಿನೀ ಡ್ಯಾಪ್ನಿಯವರು ನನ್ನ ಮುಂದಿನ ಭವಿಷ್ಯದ ಬೆನ್ನೆಲುಬು ಆಗಿ ನನಗೆ ಕಲಿಯಲಿಕ್ಕೆ ಸ್ಪೋನ್ಸರ್ ಮಾಡಿದರು. ಹಾಗೆ ನಾನು ವರ್ಷ ವರ್ಷ ಸಿಕ್ಕಿದ ಹಣದಲ್ಲಿ ನನ್ನ ಫೀಸ್ ಕಟ್ಟುತ್ತಿದ್ದೆ. ನನಗೆ ಹಾಗೂ ತಂಗಿಗೆ ಪುಸ್ತಕಗಳನ್ನು ಭಗಿನಿ ಡ್ಯಾಪ್ನಿಯವರು ಕೊಡುತ್ತಿದ್ದರು. ನನ್ನ ಮನೆಯ ಜ್ಯೋತಿ ಬೆಳಗಲು ಧರ್ಮ ಜ್ಯೋತಿ ಸಂಸ್ಥೆಯು ಕಾರಣವಾಯಿತು. ಈಗ ನಾನು ನನ್ನ ಡಿಗ್ರಿ ವಿದ್ಯಾಭ್ಯಾಸವನ್ನು ಮುಗಿಸಿ ನಂತರ 2 ವರ್ಷ ಬಿ.ಎ.ಡ್ ಪದವಿಯನ್ನು ಕಲಿತೆನು. ನಾನು ಶಿಕ್ಷಕಿಯಾಗಿ ನನ್ನ ಸ್ವಂತ ಕಾಲಿನಲ್ಲಿ ನಿಲ್ಲಲು ಧರ್ಮ ಜ್ಯೋತಿ ಸಂಸ್ಥೆಯು ಕಾರಣವಾಯಿತೆಂದು ಬಹಳ ಹೆಮ್ಮೆಯಿಂದ ಹೇಳಲು ಬಯಸುತ್ತೇನೆ.

ನನ್ನ ಮನೆಯ ಬಗ್ಗೆ ಹೇಳುವುದಾದರೆ ತಾಯಿಗೆ ವಿದ್ಯಾಭ್ಯಾಸವಿಲ್ಲದ್ದಿರೂ ತನ್ನ ಮಕ್ಕಳು ಕಲಿತು ಒಳ್ಳೆಯ ಸತ್ಪ್ರಜೆಗಳಾಗಬೇಕೆಂದು ಪ್ರತಿದಿನ ಆಶಿಸುತಿದ್ದರು. ಅವರು ತನಗೆ ಎಷ್ಟೊ ಕಷ್ಟಬಂದರು ಸಹಿಸಿ ಮಕ್ಕಳ ಜೀವನವನ್ನು ರೂಪಿಸುವ ಫಲ ನನ್ನನ್ನು ಒಂದು ಒಳ್ಳೆಯ ಶಿಕ್ಷಕಿಯಾಗಲು ಸಾಧ್ಯವಾಯಿತು. ಅವರ ಶ್ರಮ ಹಾಗೂ ಧರ್ಮ ಜ್ಯೋತಿಯ ಸಹಕಾರ ನಾನು ಯಾವತ್ತು ಮರೆಯುವುದಿಲ್ಲ.

ಮನೆಯಲ್ಲಿ ನಾವೆಲ್ಲರು ಒಂದು ಹೊತ್ತಿನ ಊಟಕ್ಕೆ ಕಷ್ಟಪಡುತ್ತಿದ್ದೆವು. ನನ್ನ ತಾಯಿ ಕಷ್ಟದಿಂದ ಬೀಡಿ ಕಟ್ಟಿ ಒಟ್ಟು ಮಾಡಿದ ಹಣದಿಂದ ತೆಗೆದು ಕೊಂಡ ಜಾಗವನ್ನು ನನ್ನ ಮಾವ ಮೋಸದಿಂದ ಕೈವಶ ಮಾಡಲು ಪ್ರಯತ್ನಿಸಿದಾಗ ನಮಗೆ ಕೋರ್ಟಿನಲ್ಲಿ ನ್ಯಾಯ ಸಿಕ್ಕಿತು. ಆದರೆ ನನ್ನ ತಂದೆ ಇನ್ನು ಮನೆಯಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ನಾನು ಮೊದಲು ನನ್ನ ಪ್ರೈಮರಿ ಶಿಕ್ಷಣವನ್ನು ವಿದ್ಯಾಜ್ಯೋತಿ ಹಿರಿಯ ಪ್ರಾಥಮಿಕ ಶಾಲೆ ಜ್ಯೋತಿನಗರದಲ್ಲಿ ಮುಗಿಸಿ, ನನ್ನ ಹೈಸ್ಕೂಲ್ ಶಿಕ್ಷಣ, ಪದವಿ ಪೂರ್ವ ಶಿಕ್ಷಣ, ಹಾಗೂ ಬಿ.ಎಸ್.ಸಿ ಡಿಗ್ರಿ ಶಿಕ್ಷಣವನ್ನು ಸಂತ ಆಗ್ನೆಸ್ ಕಾಲೇಜಿನಲ್ಲಿ ಮುಗಿಸಿದೆನು. ನನ್ನ ಬಿ.ಎಡ್ ಸಂತ ಎಲೋಸಿಯಸ್ ಕಾಲೇಜಿನಲ್ಲಿ 2018ರಲ್ಲಿ ಮುಗಿಸಿ ಒಳ್ಳೆಯ ಕೆಲಸಕ್ಕಾಗಿ ಆತೋರೆಯುತ್ತೇನೆ. ನನ್ನ ಇಲ್ಲಿವರೆಗಿನ ಶಿಕ್ಷಣಕ್ಕೆ ಕಾರಣರಾದ ನನ್ನ ಸ್ಪೋನ್ಸರ್ Women's Choir Octovia ಹಾಗೂ Dharma Jyothi Social Centre ಇವರ ಕುಟುಂಬದವರಿಗೆ ಕೃಜತ್ಞೆಗಳನ್ನು ಸಲ್ಲಿಸುತ್ತೇನೆ. ಇವರೆಲ್ಲರ ಸಹಕಾರ ನನ್ನ ಇಡೀ ಕುಟುಂಬಕ್ಕೆ ಸಹ–ಕಾರಿಯಾಗಿದೆ.

ಒಂದು ವೇಳೆ ಇವರೆಲ್ಲರ ಸಹಾ–ಯವಿಲ್ಲದಿದ್ದರೆ ನಾನು ನನ್ನ ಶಿಕ್ಷಣವನ್ನು 6ನೇ ತರಗತಿಯಲ್ಲಿ ನಿಲ್ಲಿಸಿ ಅಮ್ಮನಂತೆ ಬೀಡಿ ಕಟ್ಟುತ್ತಿದ್ದೆ. ಅಥವಾ ನನ್ನ ಭವಿಷ್ಯ ಕೂಡಾ ಉತ್ತಮ ರೀತಿಯಲ್ಲಿ ರೂಪಿಸಲು ಸಾಧ್ಯವಾಗುತ್ತಿರಲಿಲ್ಲ. ಮಾತ್ರವಲ್ಲದೆ ಏನಾದರೂ ತೊಂದರೆಯಾದರೆ ಸಹಾಯಕ್ಕೆ ಇತರರನ್ನು ಅವಲಂಬಿಸಬೇಕಾಗಿತ್ತು. ಸಮಾಜದ ದುಷ್ಟಶಕ್ತಿಗಳ ಹಿಂಸೆ, ಕ್ರೂರತನಕ್ಕೆ ಬಲಿಪಶುವಾಗುತ್ತಿದ್ದೆ.

ನಾನು ಇಂದು ಪಡೆದುಕೊಂಡ ಶಿಕ್ಷಣವು ಕೇವಲ ವೃತ್ತಿ ಜೀವನ ನಡೆಸಲು ಮಾತ್ರ ಸಹಾಯಕವಾಗದೆ ನನ್ನ ತಂದೆ ತಾಯಿಯರನ್ನು ಚೆನ್ನಾಗಿ ನೋಡಿಕೊಳ್ಳಲು ಅವರ ಕಷ್ಟಗಳಿಗೆ ಸ್ಪಂದಿಸಲು ಹಾಗು ತಂಗಿಗೆ ಭವಿಷ್ಯ ರೂಪಿಸುವ ಬಗ್ಗೆ ಮಾರ್ಗದರ್ಶನ ನೀಡಲು ಸಹಕಾರಿಯಾಗಲಿದೆ. ದೇವರ ಆಶೀರ್ವಾದಗಳು ಸದಾ ನಮ್ಮ ಮೇಲೆ ಇರಲೆಂದು ಬೇಡುತ್ತೇನೆ. ಈ ಧರ್ಮ ಜ್ಯೋತಿ ಸಂಸ್ಥೆಯ ಮುಂಖಾಂತರ ಮಾಡುವ ಎಲ್ಲ ಕೆಲಸಗಳು ಯಾಶಸ್ವಿಯಾಗಲೆಂದು ಆಶಿಸುತ್ತಾ,

ನನ್ನಂತಹ ಅನೇಕ ಬಡ ಮಕ್ಕಳ ಬಾಳಿಗೆ ದಾರಿ ದೀಪಾವಾಗಲೆಂದು ಹಾರೈಸುತ್ತೇನೆ. ನನ್ನಂತಹ ಬಡ ಮಕ್ಕಳ ಜೀವನದಲ್ಲಿ ಒಂದು ಆಶಾಕಿರಣವಾಗಿ ನಾನು ಪ್ರಜ್ವಲಿಸಲು ಇಚ್ಛಿಸುತ್ತೇನೆ.

### ಲತಾ ಆಚಾರ್ಯ ಅವರ ಕುಟುಂಬದ ಪರಿಚಯ

ನಾನು ಜಯಲಕ್ಷ್ಮಿ ಲತಾನ ತಾಯಿ: ನಾವು ತುಂಬಾ ಬಡತನದಲ್ಲಿ ಜೀವನ ಸಾಗಿಸುತ್ತಿದ್ದೇವು. ನನ್ನ ಗಂಡ ಮರದ ಕೆಲಸ ಹಾಗೂ ನಾನು ಮಕ್ಕಳ ಪೋಷಣೆಯ ಜೋತೆ ಬೀಡಿಕಟ್ಟಿ ನಮ್ಮ ಸಂಸಾರ ಸಾಗಿಸುತ್ತಿದ್ದೆವು. ನಮಗೆ ಇಬ್ಬರು ಮಕ್ಕಳು ದೊಡ್ಡ ಮಗಳು ಲತಾ 6ನೇ ತರಗತಿಯಲ್ಲಿ ಹಾಗು ಚಿಕ್ಕ ಮಗಳು 3ನೇ ತರಗತಿಯಲ್ಲಿ ಕಲಿಯುತ್ತಿರುವಾಗ ನನ್ನ ಗಂಡನಿಗೆ ಹೃದಯಘಾತವಾಯಿತು. ಹೀಗೆ ಅವರು ದುಡಿಯಲು ಅಶಕ್ತರಾದಾಗ ಮುಂದಿನ ಜೀವನ ನಡೆಸಲು ತುಂಬ ಕಠಿಣ ಎನಿಸಿತ್ತು. ಒಂದೆಡೆ ಮಕ್ಕಳ ಶಿಕ್ಷಣ, ಇನ್ನೊಂದೆಡೆ ಗಂಡನ ಆರೋಗ್ಯದ ಪರಿಸ್ಥಿತಿ ನಮಗೆ ದಿನ ನಡೆಸಲು ತುಂಬ ಕಷ್ಟವಾಯಿತು. ಆಗ ಧೃತಿಗೆಡದೆ ಪರಿಚಿತರ ಸಹಾಯದಿಂದ ಧರ್ಮ ಜ್ಯೋತಿ ಸಮಾಜ ಸೇವಾ ಸಂಸ್ಥೆಯಲ್ಲಿ ಸಹಾಯಕ್ಕಾಗಿ ಕೈಚಾಚಿದೆವು.

ಧರ್ಮ ಜ್ಯೋತಿ ಸಮಾಜ ಸೇವಾ ಸಂಸ್ಥೆಯು ನಮ್ಮ ಮುಂದಿನ ಭವಿಷ್ಯದ ಬೆನ್ನುಲುಬಾಗಿ ನಿಂತಿತು. ನನಗೆ ಎಷ್ಟೆ ಕಷ್ಟ ಆದರೂ ಲೆಕ್ಕಿಸದೆ ನನ್ನ ಮಕ್ಕಳಿಗೆ ಒಳ್ಳೆಯ ಭವಿಷ್ಯವನ್ನು ರೂಪಿಸಿಕೊಡಬೇಕೆಂಬುದು ನನ್ನ ಛಲವಾಗಿತ್ತು. ಏಕೆಂದರೆ ವಿದ್ಯಾಭ್ಯಾಸವಿಲ್ಲದೆ ನಾನು ಪಟ್ಟಂತಹ ಕಷ್ಟವನ್ನು ನನ್ನ ಮಕ್ಕಳು ಅನುಭವಿಸಬಾರದೆಂಬುದೇ ನನ್ನ ದೃಡ ನಿರ್ಧಾರವಾಗಿತ್ತು.

ಈಗ ನನ್ನ ದೊಡ್ಡ ಮಗಳು ಲತಾ ಆಚಾರ್ಯ ಬಿ.ಎಸ್.ಸಿ ಮತ್ತು ಬಿಎಡ್ ಶಿಕ್ಷಣ ಪಡೆದು ಆಕೆ ಶಿಕ್ಷಕಿಯಾಗಬೇಕೆಂದಿರುವ ಕನಸು ಈಡೇರುತ್ತಿದೆ. ನನಗೆ ನನ್ನ ಮಗಳ ಸಾಧನೆ ತುಂಬ ಖುಷಿ ತಂದಿದೆ.

Dharma Jyothi Social Centre ಹಾಗೂ Women's Choir Octovia ಇವರ ಕುಟುಂಬದವರಿಗೆ ಕೃಜತ್ಞೆಗಳನ್ನು ಸಲ್ಲಿಸುತ್ತೇನೆ. ಇವರೆಲ್ಲರ ಸಹಕಾರ ನನ್ನ ಇಡೀ ಕುಟುಂಬಕ್ಕೆ ಸಹಕಾರಿಯಾಗಿದೆಂದು ಬಹಳ ಖುಷಿಯಿಂದ ತಿಳಿಸುತ್ತೇನೆ.

---

## ರಾಜೇಶ್ವರಿ ಶೆಟ್ಟಿಗಾರ ಅವರ ಕುಟುಂಬದ ಪರಿಚಯ:



ನಾನು ಅಪ್ಪಿ ಮತ್ತು ನನ್ನ ಗಂಡ ವೆಂಕಟರಮಣ ಶೆಟ್ಟಿಗಾರ್. ನಾನು ಅನಾರೋಗ್ಯ ಸ್ಥಿತಿಯಲ್ಲಿರುವಾಗ ನನಗೆ ಗರ್ಭಕೋಶದ ಸಮಸ್ಯೆಯಿಂದ ಕೂಡಿದ್ದಾಗ ನನ್ನ ಯಜಮಾನರು ಕೀಟನಾಶಕ ಎಣ್ಣೆಯನ್ನು ಸಿಂಪಡಿಸುವ ಕೆಲಸದಲ್ಲಿದ್ದರು.

ನಾವಿಬ್ಬರೂ ಅನಾರೋಗ್ಯದಲ್ಲಿರುವಾಗ ನನ್ನ ಮಗಳಿಗೆ ಶಾಲೆಗೆ ಕಳುಹಿಸಲು ಅನಾನುಕೂಲವಾಗಿತ್ತು. ನಾನು ಧರ್ಮ ಜ್ಯೋತಿ ಸಂಸ್ಥೆಗೆ ಬೇಟಿ ನೀಡಿ ನನ್ನ ಸಮಸ್ಯೆಯನ್ನು ಹೇಳಿಕೊಂಡಾಗ ನಮ್ಮ ಮನೆ ಬೇಟಿ ಮಾಡಲು ಸಮಾಜ ಸೇವಾ ಕಾರ್ಯಕರ್ತರನ್ನು ಕಳುಹಿಸಿ ನಮ್ಮ ಮಗಳಿಗೆ ರಾಜೇಶ್ವರಿಗೆ 6ನೇ ತರಗತಿಯಲ್ಲಿ Felis Friend Depatment D/1014 ಇವರ ಮುಖಾಂತರ ಅವಳಿಗೆ sponsorship ದೊರಕತೊಡಕಿತ್ತು. ಅಂದಿನಿಂದ ನನ್ನ ಮಗಳು ಚೆನ್ನಾಗಿ ಕಲಿತು ಇಂದು B.Com studies ಮುಗಿಸಿ 2018 ರಲ್ಲಿ Airport Mangalore ನಲ್ಲಿ passport Enquiry office ನಲ್ಲಿ ಕೆಲಸ ನಿರ್ವಹಿ-ಸುತ್ತಿದ್ದಾಳೆ.

ನಾನು Felis Friend Depat-ment ಹಾಗೂ Caritas Age-ncy ಮತ್ತು Dharma Jyothi ಸಂಸ್ಥೆಗೆ ಚಿರಋಣಿಯಾಗಿದ್ದೇನೆ. ನಮಗೆ ಕಷ್ಟದಲ್ಲಿರುವಾಗ ಸಹಾಯ ಮಾಡಿದ್ದಕ್ಕಾಗಿ ನಾನು ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

## ಶಿಕ್ಷಣ ಸಹಾಯ



ನಾನು ಸುಶೀಲ ಬಂಟ್ವಾಳದಲ್ಲಿ ವಾಸಿಸುತ್ತಿದ್ದು ನನ್ನ ಮಗಳಾದ ಸ್ವಾತಿಗೆ 2005ರಲ್ಲಿ ಧರ್ಮಜ್ಯೋತಿ ಸಂಸ್ಥೆಯಿಂದ ಮೊದಲ ಬಾರಿಗೆ ಸ್ಪೋನ್ಸರ್‌ಶಿಪ್ ದೊರಕಿತು. ನನ್ನ ಅಕ್ಕ ಲಲಿತರವರು ವಾಮಂಜೂರಿನಲ್ಲಿ ವಾಸಿಸುತ್ತಿದ್ದು ಅವರ ಮಗನಿಗೆ ಈ ಸಂಸ್ಥೆಯಿಂದ ಸಹಾಯ ದೊರೆಯುತ್ತಿದ್ದರಿಂದ ಅವಳು ನನಗೂ ಈ ಸಂಸ್ಥೆಯ ಬಗ್ಗೆ ತಿಳಿಸಿ ಇಲ್ಲಿಗೆ ಬರುವಂತೆ ಸೂಚಿಸಿದಳು. ನನ್ನ ಗಂಡ 2004ರಲ್ಲಿ ಸ್ವರ್ಗಾಧೀನರಾಗಿದ್ದರು. ಗಂಡ ತೀರಿ ಹೋದ ಮೇಲೆ ಮನೆಯಲ್ಲಿ ದುಡಿಯುವವರು ಯಾರೂ ಇಲ್ಲದ ಕಾರಣ ನಾನು ಬೀಡಿ ಕಟ್ಟುವ ಕೆಲಸ ಮಾಡಲು ಪ್ರಾರಂಭಿಸಿದೆನು. 2 ಮಕ್ಕಳನ್ನು ಸಾಕುವ ಜವಾಬ್ದಾರಿ ನನ್ನೊಬ್ಬಳ ಹೆಗಲ ಮೇಲೆ ಬಂತು. ಬೀಡಿ ಕಟ್ಟುವ ಕೆಲಸ ಮಾಡಿ ಮಕ್ಕಳ ಹಾಗೂ ನನ್ನ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೆ. ಆದರೆ ಮಕ್ಕಳ ಶಿಕ್ಷಣಕ್ಕಾಗಿ ನಾನು ತುಂಬಾ ಕಷ್ಟ-ಪಡಬೇಕಾಯಿತು. ಮಕ್ಕಳ ಶಾಲಾ ಪುಸ್ತಕ, ಸಮವಸ್ತ್ರ, ಬ್ಯಾಗು ಹಾಗೂ ಶಾಲಾ ಶುಲ್ಕ ಇತ್ಯಾದಿಗಳಿಗೆ ಹಣ ಹೊಂದಿಸಲು ನನಗೆ ಕಷ್ಟವಾಗುತ್ತಿತ್ತು.

ನಾನು ಧರ್ಮಜ್ಯೋತಿ ಸಂಸ್ಥೆಯನ್ನು ಭೇಟಿ ಮಾಡಿ ನನ್ನ ಕಷ್ಟವನ್ನು ತಿಳಿಸಿದೆನು. ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಈ ಸಂಸ್ಥೆಯು ತೆಗೆದುಕೊಂಡು ನನ್ನ ಹೆಗಲ ಮೇಲಿನ ಜವಾಬ್ದಾರಿಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿತು.

ಈಗ ನನ್ನ ಮಗಳು ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಮಾಡಿ ಕೆಲಸ ನಿರ್ವಹಿಸಲು ಸಜ್ಜಾಗಿದ್ದಾಳೆ. ಮಕ್ಕಳ ಶಿಕ್ಷಣಕ್ಕಾಗಿ ಧರ್ಮಜ್ಯೋತಿ ಸಂಸ್ಥೆಯು ಮಾಡಿದ ಸಹಾಯಕ್ಕಾಗಿ ನಾನು ಚಿರರುಣಿಯಾಗಿರುತ್ತೇನೆ.

## ಉಪ್ಪಿನ ಕಾಯಿ ರುಚಿ:



ನಾನು ಝೀನತ್ ಗಂಡ ಲತೀಫ್ ವಯಸ್ಸು 37, ಮೂಲತಃ ವಾಮಂಜೂರು ಪಿಲಿಕುಲದ ನಿಸರ್ಗಧಾಮ ಊರಿನವರು. ನಾನು ಒಂದು ಬಡ ಕುಟುಂಬದವಳಾಗಿದ್ದು ಧರ್ಮ ಜ್ಯೋತಿ ಸ್ವ-ಸಹಾಯ ಸಂಘದವರ ಪ್ರೇರಣೆಯಿಂದ ಹಾಗೂ ನನ್ನ ಮಕ್ಕಳ ವಿಧ್ಯಾಭ್ಯಾಸಕ್ಕಾಗಿ ಒಂದು ವರ್ಷದಿಂದ ಉಪ್ಪಿನಕಾಯಿ ತಯಾರಿಸುವ ಸ್ವ-ಉದ್ಯೋಗ ವನ್ನಾಗಿ ಮಾಡಿ ನನ್ನ ಜೀವನವನ್ನು ನಡೆಸುತ್ತಿದ್ದೇನೆ. ಸ್ವ-ಉದ್ಯೋಗದ ಅಭಿರುಚಿ ಹೊಂದಿದ ನನಗೆ ತನ್ನ ತಂಗಿಯಾದ ದಿಲ್‌ಶಾದ್ ರವರು ತುಂಬಾ ಸಹಕಾರಿಯಾಗಿದ್ದಾರೆ. ನಾವಿಬ್ಬರೂ ಸೇರಿ SMT PICKLES ಎಂಬ ನಾಮಧೇಯದೊಂದಿಗೆ ಸ್ಥಳೀಯ ಅಂಗಡಿಗಳಿಗೆ ಮಾರಿ ಸ್ವಾವಲಂಬನೆಯ ಜೀವನವನ್ನು ನಡೆಸುತ್ತಿದ್ದೇವೆ. ಸ್ವಂತ ಉದ್ಯೋಗ-ವನ್ನು ನಡೆಸಲು ಆಸಕ್ತಿಯಿಂದ ಹಲವಾರು ಮಾಹಿತಿಗಳನ್ನು ಧರ್ಮಜ್ಯೋತಿ ಸಂಸ್ಥೆಯಿಂದ ಪಡೆದುಕೊಂಡಿದ್ದೇನೆ. ನನ್ನ ಗಂಡ ನನ್ನ ಬೆನ್ನೆಲುಬಾಗಿ ಸಹಕರಿಸುತ್ತಿದ್ದಾರೆ. ಇಂತಹ ಮಾರ್ಗದರ್ಶನ ನೀಡಿದ ಧರ್ಮಜ್ಯೋತಿ ಸಂಸ್ಥೆಗೆ ನಾನು ಅಬಾರಿಯಾಗಿದ್ದೇನೆ.

## ಸ್ವಾವಲಂಬನೆ ಬದುಕು :



ನಾನು ರಾಜೀವಿ ಗಂಡ ಶಂಕರ ವಯಸ್ಸು 38 ಪಚ್ಚನಾಡಿಯ ನಿವಾಸಿಯಾಗಿದ್ದು ಇಬ್ಬರು ಮಕ್ಕಳೊಂದಿಗೆ 20 ವರ್ಷಗಳಿಂದ ಜೀವನ ಸಾಗಿಸುತ್ತಿದ್ದೇನೆ. ಜೀವನೋಪಾಯಕ್ಕಾಗಿ ಬೀಡಿ ಕಟ್ಟಿ ದಿನಕಳೆಯುವಾಗ ಧರ್ಮಜ್ಯೋತಿ ಸಂಸ್ಥೆಯ ಪರಿಚಯವಾಯಿತು. ನಾನು ಸಂಘದಲ್ಲಿ ಸೇರಿಕೊಂಡು ಉಳಿತಾಯದೊಂದಿಗೆ ಸ್ವಂತ ಉದ್ಯೋಗವನ್ನು ಮಾಡುವ ಹಂಬಲದಿಂದ ಸರಕಾರಿ ಸ್ಥಳದಲ್ಲಿ ಸಣ್ಣದೊಂದು ಗೂಡಂಗಡಿಯನ್ನು ಆರಂಬಿಸಿದೆನು. ಧರ್ಮಜ್ಯೋತಿ ಸಂಸ್ಥೆಯ ಪ್ರೇರಣೆಯಿಂದ ಮಕ್ಕಳ ಭವಿಷಾಕ್ಕಾಗಿ ಹಗಲು ರಾತ್ರಿ ದುಡಿದು ಹಾಗೂ ಸ್ವ–ಸಹಾಯ ಗುಂಪಿನಿಂದ ನೇರಸಾಲವನ್ನು ಪಡೆದುಕೊಂಡು ಈಗ ಸ್ವಲ್ಪ ಸ್ವಂತ ಅಂಗಡಿಯನ್ನು ಹೊಂದಿದ್ದೇನೆ. ಉತ್ತಮ ರೀತಿಯಲ್ಲಿ ಏನೂ ಅಡೆತಡೆಗಳಿಲ್ಲದೆ ಈ ಅಂಗಡಿಯಿಂದ ಜೀವನ ಸಾಗಿಸುತ್ತಿದ್ದೇನೆ. ಮಕ್ಕಳಿಗೆ ಧರ್ಮಜ್ಯೋತಿಯಿಂದ ಸ್ಪೋನ್ಸರ್ ಪಡೆದು ಉನ್ನತ ಮಟ್ಟಕ್ಕೆ ತಲುಪಿದ್ದಾರೆ. ನನ್ನ ಉದ್ಯೋದಲ್ಲಿ ನನಗೆ ಸಾಕಷ್ಟು ತೃಪ್ತಿ ಇದೆ. ನನ್ನ ಜೀವನ ಸುಧಾರಣೆಯಾಗಿದೆ. ಧರ್ಮಜ್ಯೋತಿಗೆ ವಂದನೆಗಳು.

## SUCCESS STORIES

### Terrance Rajesh Aranha ( Child Code :7217 Sponsor Code 8915)



My name is Terrance Aranha and I come from a place called Devarapadav at Vamanjoor. My house is quite close to Dharma Jyothi Social Centre, Mangalore. Our family structure is of Nuclear type. My parents are Richard Aranha and Treeza Aranha. I have one elder sister called Teena.

I come from a poor family. My father was working as an Attender in a school and now he is retired. His income was very meagre to support us. He also had the responsibility to take care of his aged mother and to provide for her medication. Therefore my mother also started working as a helper at a school Creche. My parents' income was sufficient only to meet the basic requirements of our family but they could not afford to provide for my sister's and my education. Our parents wanted to give us good education.

The Co-ordinator of Dharma Jyothi Social Centre intervened at this hard period in our lives and enrolled me in the sponsorship Programme when I was in 6$^{th}$ grade. This changed the course of my life for better. Pan Lazak Martin & Lazakova Petra were my beloved sponsors. Their financial support to my education was like a Oasis in a desert. I was filled with confidence and hope that I will be able to complete my college studies without any obstacle.

After completing my Pre-University in Commerce I enrolled at St. Raymond's College for my University studies In May 2012 I have successfully completed my studies and obtained a degree in Bachelor of Commerce. If it was

not for sponsorship I would have discontinued my studies in 10th grade itself and taken up a small job. But because of my degree studies now I can hold a better job. After completing my studies I worked for one year in MPhasis a call centre company. Then for 3 years I worked as an Assistant Clerk in Pharmacy at Fr. Muller Hospital, Mangalore. From 2016 onwards I have been working as an Accountant in Bowshar International Hotel in Muscat and earning good salary. We have built a new house. My sister Teena got married and is settled in her life. My financial support to our parents has paved a way for much desired progress of our family. My family and I are very happy and satisfied. We all are ever grateful to Caritas Prague for their timely help without which we as a family would not have reached where we are now. Thank you Caritas Prague.

---

## Melroy Clement Pinto (child Code: 7282 Sponsor code: 8884 )



My name is Melroy Clement Pinto. I was an orphan child. I was adopted by my lovely parents Late Maxim Pinto and Late Cecilia Pinto. They were poor. This did not stop them from loving me and giving me needed shelter and care. I felt very secured and strong because of them. Unfortunately my dear mother developed diabetes and other health complications. Later she was hospitalized and her leg was amputated. It was a hard blow on me and my father. As my father was a low daily waged man, he could not provide for my mother's medical expenses as well as meet my educational needs. During this period Sr. Daphne from Dharma Jyothi Social Centre intervened like an Angel in disguise and enrolled me for Caritas Prague Sponsorship Programme. She also helped my mother to get admitted and paid for my mother's medical expenses. This relieved my father's burden a lot. Our loving care and medical treatment did not improve my mother's health condition and she succumbed to her disease in 2006. Later my father was diagnosed of cancer. Tragedy after tragedy was hitting us. I was frightened and confused. I felt very insecure and did not know what to do. Only Sr. Daphne was there for my support. She took care of my father's medical expenses through Caritas Prague. My father's health deteriorated and he died in 2009. My beloved parents had gone from my life.

My world collapsed on me. I was helpless and in grief. I had nowhere to go. I had become orphan again. God was my strength and he gave me Sr. Daphne. Dharma Jyothi Social Centre was

like my home. I have completed my Bachelor of Commerce studies. All these achievements made me happy and satisfied. I have successfully completed my post graduation studies in 2015. Soon my completing my studies I got an offer to work for one year as an Accounts Executive at Dubai Auto Gallery and from May 2017 till date I have been working as Senior Finance and Accounts Executive at Curtin University, Dubai. Now I am doing well in my career and earning a good salary.

I ever remain grateful to Mr. Petr Klimek all through my life. I will never forget my sponsors Vymazalova Marta and Mr. Petr Klimek's for their good will and sacrificing spirit to give me better life. Their loving memory will be part of my life always. Thank you Caritas Prague.

---

## Shainy Josna D'souza (Child Code: 15132 Sponsor Code: 31837)



I am Shainy Josna D'souza. I reside in a village called Kullur, Mangalore, which is 12 kilometers from Dharma Jyothi Social Centre. My parents are Oswald and Vishala Maria. I have one elder brother and elder sister. Both are married. At the time of enrollment in Child Sponsorship Programme my father was working as a painter. His job was irregular so my mother had to take up a job as a housemaid and support the family. With their meager income they were finding difficult to provide for our daily needs to support our education.

At this difficult time, the Co-ordinator of Dharma Jyothi Social Centre intervened and taken me for Child Sponsorship Programme when I was in 2nd grade. Mr. Ivan and Late Mrs. Vera Muchkova were my beloved sponsors. Their kind support and constant encouragement through letters gave me hope and for my family that I could complete my education in General Nursing. At present I am working as a Nurse in Fr. Muller's Hospital, Mangalore and earning a decent salary. I feel proud that I can stand on my own feet and support my family economically. I am also saving some amount of money for my future life.

Sponsorship helps from Caritas Prague has given me and my family much hope and confidence that I can achieve my ambition in life. All of these were possible because of my beloved sponsor Mr. Ivan and Late Mrs. Vera Muchkova. I and my family will always remain grateful to them. We are also thankful to the Co-ordinator of Dharma Jyothi Social Centre for always holding our hands in the time of our need and helping us out. Thank you Caritas Prague.



# ಸಾಧನೆ

ನಾನು ಶ್ರೀಮತಿ ತಿಲಕ, ಶ್ರೀಯುತ ರಾಮಚಂದ್ರರ ಪತ್ನಿ, ತ್ರೊಪಿಕಲ್, ವಾಮಂಜೂರು ನಿವಾಸಿಯಾಗಿದ್ದೇನೆ. ನನ್ನ ವಯಸ್ಸು 53. ಸುಮಾರು 25 ವರ್ಷಗಳಿಂದ ನನಗೆ ಧರ್ಮಜ್ಯೋತಿ ಸಮಾಜ ಸೇವಾ ಸಂಸ್ಥೆಯ ಪರಿಚಯವಾಗಿದೆ. 2002ರಲ್ಲಿ ಮನೆಯಲ್ಲಿಯೇ ಕುಳಿತಿದ್ದ ಅನೇಕ ಮಹಿಳೆಯರನ್ನು ಒಟ್ಟುಗೂಡಿಸಿ, ಸಂಘಟಿಸಿ ನಮಗೆ ಮಹಿಳಾ ಸಂಘವನ್ನು ಮಾಡಲು ಪ್ರೇರಣೆ ನೀಡಿದರು.

ಧರ್ಮಜ್ಯೋತಿ ಸಂಸ್ಥೆಯ ವತಿಯಿಂದ ಅಂದು ಪ್ರಾರಂಭಿಸಲ್ಪಟ್ಟ ನಮ್ಮ ಮಹಿಳಾ ಸ್ವ–ಸಹಾಯ ಸಂಘ ಇಂದೂ ಸಹ ಉತ್ತಮ ರೀತಿಯಲ್ಲಿ ನಡೆಯುತ್ತಿದೆ ಎಂದು ಹೇಳಲು ಇಚ್ಛಿಸುತ್ತೇನೆ. ಇದಕ್ಕೆ ಕಾರಣ ಕರ್ತರಾದ ಎಲ್ಲಾ ಧರ್ಮಜ್ಯೋತಿಯ ಎಸ್. ಆರ್. ಎ ಭಗಿನಿಯರನ್ನು ಹಾಗೂ ಕಾರ್ಯಕರ್ತರನ್ನು ಅಭಿನಂದಿಸುತ್ತೇನೆ.

ಧರ್ಮಜ್ಯೋತಿಯಿಂದ ಅನೇಕ ವಿಷಯಗಳ ಬಗ್ಗೆ ಜಾಗ್ರತಿ ಹೊಂದಿದ್ದೇವೆ. ಸರಕಾರಿ ಸೌಲಭ್ಯಗಳ ಬಗ್ಗೆ ನಾಯಕತ್ವ, ಸ್ವ–ಉದ್ಯೋಗ, ಕೌಶಲ್ಯಗಳ ಬಗ್ಗೆ ಆರೋಗ್ಯದ ಮಾಹಿತಿ ಹಾಗೂ ಶಿಬಿರಗಳ ಮುಖಾಂತರ ಅನೇಕ ಪ್ರಯೋಜನವನ್ನು ಪಡೆದುಕೊಂಡಿದ್ದೇವೆ. ಅನೇಕ ಮಹಿಳೆಯರು ಸ್ವ–ಉದ್ಯೋಗವನ್ನು ಮಾಡಿ ಸ್ವಾವಲಂಬನೆಯ ಬದುಕನ್ನು ಜೀವಿಸುತ್ತಿದ್ದೇವೆ ಎಂದು ತಿಳಿಸಲು ಸಂತೋಷಪಡುತ್ತೇನೆ. ಒಕ್ಕೂಟದ ಸಭೆಯಲ್ಲಿ ನಮಗೆ ಸ್ವಂತ ಉದ್ಯೋಗಮಾಡಲು ಕೆಲವು ವಿಷಯಗಳನ್ನು ನಮಗೆ ಕಲಿಸಿದರು ಅದರಂತೆ ನಾನು ಸೋಪ್‌ಮಾಡುವುದು, ಸೀರೆಗೆ ಗೊಂಡೆ ಹಾಕುವುದು, ಎಂಬ್ರಾಯ್‌ಡರಿ ಟೈಲರಿಂಗ್ ಮುಂತಾದ ವಿಷಯಗಳನ್ನು ಕಲಿತೆ. ಪ್ರಸ್ತತ ನಾನು ಟೈಲರಿಂಗ್ ವೃತ್ತಿ ಮಾಡುತ್ತಾ ನೆಮ್ಮದಿಯಿಂದ ಬಾಳುತ್ತಿದ್ದೇನೆ.

ನಾಲ್ಕು ಗೋಡೆಗಳ ಮಧ್ಯೆ ಇದ್ದ ನನು ಸಂಘವನ್ನು ಕಟ್ಟಿಕೊಂಡು ನನ್ನನ್ನು ಎಲ್ಲರು ಗುರುತಿಸಿ ಗೌರವ ಕೊಡುತ್ತಾರೆ ಇದಕ್ಕೆ ನಾನು ತುಂಬಾ ಹೆಮ್ಮೆ ಪಡುತ್ತೇನೆ. ನನ್ನ ಸಂಘದಲ್ಲಿ ಸದಸ್ಯೆಯರು ಹಾಗೂ ನೆರೆಕರೆಯವರು ಕೂಡಾ ನನ್ನಲ್ಲಿ ತುಂಬಾ ಪ್ರೀತಿ, ವಿಶ್ವಾಸದಿಂದ ಇರುತ್ತಾರೆ. ಇದಕ್ಕೆ ನನಗೆ ತುಂಬಾ ಸಂತೋಷವಗುತ್ತದೆ. ಪ್ರಸ್ತುತ ನಮ್ಮ ಸಂಘದಲ್ಲಿ 11 ಸದಸ್ಯೆಯರಿದ್ದು ತಿಂಗಳಿಗೆ 2 ಬಾರಿ ಸಭೆ ನಡೆಸಿ ಉಳಿತಾಯದಿಂದ ಹಾಗೂ ಬ್ಯಾಂಕ್‌ನಿಂದ ಸಾಲ ತೆಗೆದು ಸ್ವ–ಉದ್ಯೋಗಕ್ಕೆ ಬಳಸುತ್ತೇವೆ.

ಧರ್ಮಜ್ಯೋತಿ ಸಂಸ್ಥೆಯು ಮಹಿಳೆಯರನ್ನು ಒಟ್ಟುಗೂಡಿಸಿ ಸ್ವಂತ ಉದ್ಯೋಗ ಮಾಡಲು ಪ್ರೇರಣೆ ಕೊಟ್ಟಿದೆ. ಅನೇಕ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಮಹಿಳೆಯರು ಎಲ್ಲಾ ವಿಷಯದ ಬಗ್ಗೆ ಸಮಾಜದಲ್ಲಿ ಮುಂದೆ ಬಂದಿದ್ದೇವೆ ಮತ್ತು ಸಂಘದಿಂದ ನಮಗೆ ಎಲ್ಲರೊಡನೆ ಮಾತನಾಡಲು ಧೈರ್ಯಬಂದಿದೆ ಎಂದು ಹೇಳಲು ಇಷ್ಟಪಡುತ್ತೇನೆ. ಇದಕ್ಕೆಲ್ಲ ಕಾರಣವಾದ "ಧರ್ಮಜ್ಯೋತಿ ಸಮಾಜ ಸೇವಾ ಸಂಸ್ಥೆ" ಗೆ ನಾನು ಹಾಗೂ ಸಂಘದ ಸದಸ್ಯೆಯರು ಋಣಿಯಾಗಿರುತ್ತೇವೆ.

# ನಾ ಬದಲಾದರೆ ಬದಲಾಗುವುದು ಲೋಕ

ಒಂದೊಮ್ಮೆ ರಾಜನೊಬ್ಬ ತನ್ನ ರಾಜ್ಯದಲ್ಲಿ ಪ್ರಜೆಗಳನ್ನು ಭೇಟಿಯಾಗಲು ಪಾದಯಾತ್ರೆ ಮಾಡಿದ. ಬಹು ಕಾಲ ನಡೆದು ಸುಸ್ತಾದ ಆತನು ತನ್ನ ಅರಮನೆಗೆ ಹಿಂದಿರುಗಿ ತನ್ನ ಮಂತ್ರಿಗಳನ್ನು ಸಮಾಲೋಚನೆಗೆ ಕರೆದ. ತನ್ನ ಪಾದಯಾತ್ರೆಯ ಸಂದರ್ಭದಲ್ಲಿ ತನ್ನ ರಾಜ್ಯದಲ್ಲಿ ಸಂಚರಿಸುತ್ತಿದ್ದಾಗ ರಸ್ತೆಗಳು ಕಲ್ಲು ಮುಳ್ಳುಗಳಿಂದ ಕೂಡಿದ್ದು ತನಗೆ ತುಂಬಾ ಹಿಂಸೆಯಾಗಿದೆ ಎಂದು ತಿಳಿಸಿದ. ದಿನವೂ ಸಂಚರಿಸುವ ತನ್ನ ಪ್ರಜೆಗಳಿಗೂ ತೊಂದರೆಯಾಗದಂತೆ ತಾನೊಂದು ಉಪಾಯ ಮಾಡಿರುವುದಾಗಿ ಹೇಳಿದ.

ಮಂತ್ರಿಗಳೆಲ್ಲರೂ ಕಾತುರದಿಂದಿರುವಾಗ ರಾಜನು ಹೇಳಿದ "ನಡೆಯುವ ಕಾಲಿಗೆ ಕಲ್ಲು ಮುಳ್ಳುಗಳು ಚುಚ್ಚದಂತೆ ರಸ್ತೆಯನ್ನು ಪ್ರಾಣಿಗಳ ಚರ್ಮದಿಂದ ಮುಚ್ಚಬೇಕು". ರಾಜನ ಮಾತುಗಳನ್ನು ಕೇಳಿ ಮಂತ್ರಿಗಳೆಲ್ಲಾ ಚಿಂತಾಕ್ರಾಂತರಾದರು. ಏಕೆಂದರೆ ರಸ್ತೆಗಳನ್ನು ಚರ್ಮದಿಂದ ಮುಚ್ಚಲು ಅದೆಷ್ಟು ಪ್ರಾಣಿಗಳನ್ನು ಕೊಲ್ಲ ಬೇಕಾಗಬಹುದು?... ಕೊನೆಗೆ ಓರ್ವ ಬುದ್ಧಿವಂತ ಮಂತ್ರಿಗೆ ಒಂದು ಉಪಾಯ ಹೊಳೆಯಿತು.

ಆತನು ರಾಜನಿಗೆ ಹೇಳಿದ "ಪ್ರಭೂ, ನನ್ನದೊಂದು ಚಿಕ್ಕ ಸಲಹೆ. ಇಡೀ ರಾಜ್ಯದ ರಸ್ತೆಗಳನ್ನು ಚರ್ಮದಿಂದ ಮುಚ್ಚುವ ಬದಲು ನಿಮ್ಮ ಪಾದಗಳನ್ನು ಚರ್ಮದಿಂದ ಮುಚ್ಚಿದರೆ ನೀವು ಎಲ್ಲೇ ಹೋದರೂ ನಿಮಗೆ ಮುಳ್ಳು ಚುಚ್ಚಲಾರದು". ಮಂತ್ರಿಯ ಮಾತನ್ನು ಕೇಳಿ ರಾಜನಿಗೆ ತುಂಬಾ ಸಂತೋಷವಾಯಿತು. ಮಂತ್ರಿಯ ಸೂಚನೆಯಂತೆ ಅಂದಿನಿಂದ ಪಾದರಕ್ಷೆಗಳ ಉಗಮವಾಯಿತು.

ಹೀಗೆ ಲೋಕದಲ್ಲಿ ದೊಡ್ಡ ಬದಲಾವಣೆ ಉಂಟಾಗಬೇಕಿದ್ದರೆ ಮೊದಲು ಸಣ್ಣ ಬದಲಾವಣೆ ನಮ್ಮಲ್ಲಿ ಉಂಟಾಗಬೇಕು.

ದೇವರ ಕಾಣಿಕೆಯನ್ನು ಕಳೆದು ಕೊಳ್ಳದಿರೋಣ

ಮಕ್ಕಳೇ ಸರ್ವಶಕ್ತ ದೇವರು ಈ ಜಗದ ಏಕೈಕ ಕರ್ತಾರ. ಈ ಅದ್ಭುತ ವಿಶ್ವವನ್ನು ಸೃಷ್ಟಿಸಿದ ಸುಂದರವಾದ ವಿವರವು ನಮಗೆ ಪವಿತ್ರ ಬೈಬಲ್ಲಿನ ಆದಿಕಾಂಡದಲ್ಲಿ ದೊರೆಯುತ್ತಿದೆ.

ಬೆಳಕಿನ ಆಗರವಾದ ರವಿ, ತಾರೆ, ಗ್ರಹಗಳನ್ನು ಸೃಷ್ಟಿಸಿದ ದೇವರು ನೆಲ ಜಲ ವಾಯುವನ್ನು ಈ ಭೂಮಿಯ ಮೇಲೆ ಸ್ಥಾಪಿಸಿದರು. ಸಾಗರ, ನದಿ, ಬೆಟ್ಟಗುಡ್ಡಗಳಿಂದ ಈ ಪೃಥ್ವಿಯನ್ನು ಈ ಪ್ರಥ್ವಿಯನ್ನು ವಿಶಿಷ್ಟವಾಗಿಸಿದಿ ಸೃಷ್ಟಿಕರ್ತರು ಹಸಿರಿನ ವನಸಿರಿಯಿಂದ ಭೂಮಿಯ ಕಳೆಯನ್ನು ಬೆಳಗಿದರು. ನೀಲಿಯ ಬಾನಲ್ಲಿ ಹಾರಾಡುವ ಹಕ್ಕಿಗಳ ಚಿಲಿಪಿಲಿ ನಾದದಿಂದ ಸಂತೋಷವನ್ನು ತುಂಬಿ ದೇವರು ಪ್ರಾಣಿ ಸಂಕುಲದ ಮೆರುಗಿನಿಂದ ಭೂಮಿಯನ್ನು ಚೆಂದಗಾಣಿಸಿದರು.

ಸೃಷ್ಟಿ ಕಾರ್ಯದ ಅಂತಿಮ ಹಂತವಾಗಿ ತಮ್ಮ ಸ್ವರೂಪದಲ್ಲಿಯೇ ಮಾನವನ್ನು ಸೃಷ್ಟಿಸಿ ತನ್ನ ಕಾರ್ಯವನ್ನು ಅಂತಿಮಗೊಳಿಸಿದರು ಹಾಗೂ ಈ ಸುಂದರ ಪೃಥ್ವಿಯನ್ನು ತನ್ನ ಪ್ರೀತಿಯ ಸಂಕೇತವಾಗಿ ಮಾನವನಿಗೆ ಕಾಣಿಕೆಯಾಗಿ ನೀಡಿದರು.

ಆದರೆ ಸಕಲ ಸೃಷ್ಟಿಯಲ್ಲಿಯೇ ಬುದ್ಧಿವಂತನಾದ ಮಾನವನು ಕೃತಘ್ನನಾಗಿ ದುರಾಸೆಯಿಂದ ಈ ಭೂಮಿಯನ್ನು ವಿನಾಶದ ಅಂಚಿಗೆ ಕೊಂಡೊಯ್ದನು. ತನ್ನ ಆಸೆಬುರುಕುತನ ಹಾಗೂ ಸ್ವಾರ್ಥದಿಂದ ಭೂಮಿತಾಯಿಯ ಒಡಲಿನ ಸಂಪನ್ಮೂಲಗಳನ್ನು ಕೊಳ್ಳೆಹೊಡೆಯುತ್ತಾ ದೇವರ ಈ ಸುಂದರ ಕಾಣಿಕೆಯನ್ನು ವಿನಾಶದ ಅಂಚಿಗೆ ಕೊಂಡೊಯ್ದನು.

ಇನ್ನು ಮುಂದಾದರೂ ನಾವು ಎಚ್ಚೆತ್ತು ಕೊಳ್ಳದಿದ್ದರೆ ಮಾನವ ಕುಲದ ವಿನಾಶದ ಘೋರದುರಂತವು ನಮ್ಮನ್ನು ಸುತ್ತಿಕೊಳ್ಳುತ್ತದೆ. ನಮ್ಮ ಸ್ವಾರ್ಥದ ಪಾಪಕಾರ್ಯಗಳ ಪ್ರಾಯಶ್ಚಿತ್ತವಾಗಿ ಹಸಿರನ್ನು ಉಳಿಸಲು ನಾವು ಪಣತೊಡೋಣ. ನಮ್ಮ ಜಲಮೂಲಗಳನ್ನು ರಕ್ಷಿಸೋಣ. ಮಾಲಿನ್ಯವನ್ನು ತಡೆದು ದೇವರ ಕೃಪೆಗೆ ಪಾತ್ರರಾಗೋಣ.



**Jovita**
**9th B Std**



**Lethana L.V.**
**9th B Std**




**Sahana Acharya**
**10th Std**



**Chandrika**
**9th Std**

*With Best Compliments From*

# MODERN BAKERY

## MR DAMODAR & FAMILY

**NEAR PETROL PUMP, VAMANJOOR**
**PH: 9964027954**

*With Best Compliments From*

# AARON MEDICALS

## Pandith Mahal Vamanjoor

## Ph: 0824- 2262017


With Best Compliments From
PROPRIETERS: VEERANNA POOJARY
HOTEL AMRUTHESHWARA
VAMANJOOR,
MANGALORE
Ph : 0824-2262622


With Best Compliments From
Mob : 9448104502, 8310954932
Email : salianch@gmail.com
DIVYA STUDIO
Wedding Photosd & Videography
Jerome Complex, Vamanjoor
Mangalore - 575 028
Canon


With Best Compliments From
SHALOM
EGG CENTRE
Lesli D' Souza
OPP. VAMANJOOR CHURCH,
MANGALORE
PH: 9448306871